III	ಸಾಗರ ಸೊರಬ ನಗರ	ಸಾಗರದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಕಡೂರು ಡಿಸ್ಟ್ರಿಕ್ಟ್.

I	ಚಿಕ್ಕಮಗಳೂರು ಮೂಡಗೆರೆ	ಡೆಪ್ಯುಟಿ ಕಮಿಷನರು.
II	ಕಡೂರು ತರಿಕೆರೆ ಕೊಪ್ಪ ಯಡೆಹಳ್ಳಿ ಸಬ್ ತಾಲ್ಲೂಕು	ಚಿಕ್ಕಮಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಚಿತ್ರದುರ್ಗ ಡಿಸ್ಟ್ರಿಕ್ಟ್.

I	ಹಿರಿಯೂರು	ಡೆಪ್ಯುಟಿ ಕಮಿಷನರು.
II	ದಾವಣಗೆರೆ ಹರಿಹರ ಸಬ್ ತಾಲ್ಲೂಕು ಹೊಳಲ್ಕೆರೆ ಹೊಸದುರ್ಗ ಜಗಲೂರು	ದಾವಣಗೆರೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಜಳ್ಳಕೆರೆ ಮೊಳಕಾಲ್ಮೂರು ಚಿತ್ರದುರ್ಗ	ಚಿತ್ರದುರ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ತಾರೀಖು 10ನೆ ಡಿಸೆಂಬರ್ 1906.

ನಂ. ಆರ್. 5854—ಎಲ್. ಆರ್. 173-06—2, ಸಂ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1901ನೆ ಇಸವಿ ಜುಲೈ 10ನೆ ತಾರೀಖಿನ 264—ಆರ್. 122ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲ್ಪಟ್ಟ ಸದರಿ ಕೋಡಿನ ನಿಬಂಧನೆಗಳಲ್ಲಿ ಈ ಕೆಳಗೆ ನಮೂದಾಗುವ ತಿದ್ದುಪಾಟುಗಳನ್ನು ಮಾಡಲು ಹುಕುಂ ದಯಪಾಲಿಸಿರುತ್ತಾರೆ :—

1. 47ನೆ ನಿಬಂಧನೆಯ (ಬಿ) ಕಲಮನ್ನು ಬಿಟ್ಟು (ಸಿ) ಕಲಮನ್ನು (ಬಿ) ಕಲಮನ್ನಾಗಿ ಬದಲಾಯಿಸಬೇಕು; ಮತ್ತು ಈ ಕಡೆಯಲ್ಲಿ ಹೇಳಲ್ಪಟ್ಟ ಕಲಮಿನಲ್ಲಿ "ಹಿಂದಿನ ಕಲಂನಲ್ಲಿ ವಿವರಿಸಿರುವ ಸ್ವಭಾವದ ಜಮಿನಿನ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

2. 48ನೆ ನಿಬಂಧನೆಯಲ್ಲಿ "(ಬಿ) ಮತ್ತು (ಸಿ) ಕಲಂಗಳಲ್ಲಿ" ಎಂಬ ಮಾತುಗಳಿಗೂ ಅಕ್ಷರಗಳಿಗೂ ಬದಲಾಗಿ "(ಬಿ) ಕಲಂನಲ್ಲಿ" ಎಂಬ ಮಾತನ್ನೂ ಅಕ್ಷರವನ್ನೂ ಸೇರಿಸಬೇಕು.

3. 49 ಮತ್ತು 50ನೆ ನಿಬಂಧನೆಗಳ ಮಧ್ಯದಲ್ಲಿ ಈ ಕೆಳಗಿನ ನಿಬಂಧನೆಯನ್ನು ಸೇರಿಸಬೇಕು :—

"49 ಎ. ಒಂದು ರೈಲ್ವೆ ಸ್ಟೇಷನಿನ ಹತ್ತಿರ ಮತ್ತು ಅದರಿಂದ ಅರ್ಧ ಮೈಲಿಯೊಳಗೆ ಅಥವಾ ಸರ್ಕಾರದವರು ಆಗಿಂದಾಗ್ಗೆ ಗೊತ್ತುಮಾಡುವಂಥಾ ಫಾಸಲೆಯೊಳಗೆ ಇರುವ ಜಮಿನಿನ ಹಿಡುವಳಿಯನ್ನು, ಸರ್ಕಾರಿ ಕೆಲಸಕ್ಕೆ ಬೇಕಾದಾಗ ಯಾವ ಪ್ರತಿಫಲವನ್ನೂ ಕೊಡದೆ ಸದರಿ ಜಮಿನು ವಾಪಸು ತೆಗೆದುಕೊಳ್ಳಲ್ಪಡಲು ಗುರಿಯಾಗಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರಿಗೆ ಯುಕ್ತತೋರುವಂತೆ, ವ್ಯವಸಾಯದ ಕೆಲಸಗಳಿಗೆ ಕೊಡಬಹುದು; ಆದರೆ ಕಟ್ಟಡ ಕಟ್ಟುವ ಬಗ್ಗೆ ಮಾತ್ರ, ಸರ್ಕಾರದವರ ಪೂರ್ವಾನುಮತಿಯನ್ನು ವಜಾಂದಾಗಿ ಪಡೆದು ಮತ್ತು ಪ್ರತಿ ಸಂದರ್ಭದಲ್ಲಿಯೂ ಅವರ ಹುಕುಂಗಳಿಗೆ ಒಳಪಟ್ಟು ಅಂಥಾ ಜಮಿನು ಕೊಡಲ್ಪಡತಕ್ಕದ್ದು.

ತಾರೀಖು 12ನೆ ಡಿಸೆಂಬರ್ 1906.

ನಂ. ಆರ್. 5927—ಫಾ. 125-05—5, (1900ನೆ ಇಸವಿಯ 11ನೆ) ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1907ನೆ ಇಸವಿಯ ಜನವರಿ ಗುರ್ತಿನ ತಾರೀಖಿನ ಲಾಗಾಯಿತು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ಕಂಡ ಚಿತ್ರದುರ್ಗದಿಯೊಳಗಣ ವಿಸ್ತೀರ್ಣವು,